ಕರ್ನಾಟಕ ಸರ್ಕಾರ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಜನಸ್ಪಂದನ ಕೋಶ)

ಸಿಆಸುಇ 71 ಆರ್‌ಟಿಐ 2009

ಕರ್ನಾಟಕ ಸರ್ಕಾರದ ಸಚಿವಾಲಯ
3ನೇ ಮಹಡಿ, ಪೋಡಿಯಂ ಬ್ಲಾಕ್,
ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು.
ದಿನಾಂಕ: 21-04-2009

# ಸುತ್ತೋಲೆ

ವಿಷಯ:- ಮಾಹಿತಿ ಹಕ್ಕು ಅಧಿನಿಯಮ 2005ರಡಿ ಸ್ವೀಕೃತವಾಗುವ ಮಾಹಿತಿ ಹಕ್ಕು ಅರ್ಜಿಗಳ ಶೀಘ್ರ ವಿಲೇವಾರಿ ಬಗ್ಗೆ

---

ಮಾಹಿತಿ ಹಕ್ಕು ಅಧಿನಿಯಮ 2005ರಡಿ ಮಾಹಿತಿ ಪಡೆಯುವ ಹಕ್ಕು ಜನಸಾಮಾನ್ಯರಿಗಿದೆ. ಮಾಹಿತಿ ಹಕ್ಕು ಅಧಿನಿಯಮದಡಿ ಸ್ವೀಕೃತವಾಗುವ ಅರ್ಜಿಗಳನ್ನು ಸಕಾಲದಲ್ಲಿ ಇತ್ಯರ್ಥಪಡಿಸುವುದು ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಆದ್ಯ ಕರ್ತವ್ಯವಾಗಿದೆ. ಅರ್ಜಿದಾರರರು ಸಲ್ಲಿಸಿರುವ ಅರ್ಜಿಯಲ್ಲಿನ ವಿಷಯವನ್ನು ಪರಿಶೀಲಿಸಿ, ಮಾಹಿತಿಯನ್ನು ಸಾಧ್ಯವಾದಷ್ಟು ಬೇಗ ಆದರೆ ಮೂವತ್ತು ದಿನಗಳ ಒಳಗಾಗಿ ನಿಗದಿತ ಶುಲ್ಕ ವಸೂಲು ಮಾಡಿ ಮಾಹಿತಿಯನ್ನು ನೀಡಬಹುದು ಇಲ್ಲವೇ ತಿರಸ್ಕರಿಸಬಹುದಾಗಿದೆ. ಅರ್ಜಿದಾರರವು ಕೋರಿರುವ ಮಾಹಿತಿಯು ಬೇರೊಬ್ಬ ಸಾರ್ವಜನಿಕ ಪ್ರಾಧಿಕಾರಕ್ಕೆ ಸಂಬಂಧಿಸಿದ್ದಲ್ಲಿ ಹಾಗೆ ಸ್ವೀಕರಿಸಿರುವ ಅರ್ಜಿಯನ್ನು ಸ್ವೀಕೃತವಾದ ಐದು ದಿನಗಳ ಒಳಗಾಗಿ ಸದರಿ ಅಧಿನಿಯಮದ ಕಲಂ 6 (3) ರ ಪ್ರಕಾರ ಸಂಬಂಧಿಸಿದ ಸಾರ್ವಜನಿಕ ಪ್ರಾಧಿಕಾರಕ್ಕೆ ವರ್ಗಾಯಿಸಿ ಅರ್ಜಿದಾರರಿಗೆ ಅದರ ಬಗ್ಗೆ ಮಾಹಿತಿಯನ್ನು ನೀಡಬೇಕಾಗಿದೆ.

ಇತ್ತೀಚಿನ ದಿನಗಳಲ್ಲಿ ಮಾಹಿತಿ ಹಕ್ಕು ಅದಿನಿಯಮದಡಿ ಅರ್ಜಿಗಳು ಹೆಚ್ಚಾಗಿ ಸ್ವೀಕೃತವಾಗುತ್ತಿದ್ದು ಅವುಗಳನ್ನು ಕೂಡಲೇ ಪರಿಶೀಲಿಸಿ ಕ್ರಮಕೈಗೊಳ್ಳಲು/ವರ್ಗಾಯಿಸಲು ವಿಳಂಬವಾಗುತ್ತಿರುವ ಪ್ರಕರಣಗಳು ಗಮನಕ್ಕೆ ಬಂದಿರುತ್ತದೆ. ಇತ್ತೀಚಿನ ಒಂದು ಪ್ರಕರಣದಲ್ಲಿ ಅಂದರೆ ಶ್ರೀ ಭೀಮಪ್ಪ ಗುಂಡಪ್ಪ ಗಡಾದ (Sri.Bheemappa Gundappa Gadada)ರವರ ಮೇಲ್ಮನವಿಯನ್ನು ಇತ್ಯರ್ಥಪಡಿಸುವಲ್ಲಿ ಕರ್ನಾಟಕ ಮಾಹಿತಿ ಆಯೋಗವು ಸಾರ್ವಜನಿಕ ಮಾಹಿತಿ

ಅಧಿಕಾರಿಯು ಅರ್ಜಿಯನ್ನು ಕಲಂ 6(3)ರ ಪ್ರಕಾರ ಬೇರೊಬ್ಬ ಸಾರ್ವಜನಿಕ ಪ್ರಾಧಿಕಾರಕ್ಕೆ ವರ್ಗಾಯಿಸುವುದರಲ್ಲಿ ನಿಗದಿತ ಐದು ದಿನಗಳಿಗೂ ಮೀರಿ ಆಗಿರುವ ವಿಳಂಬದ ಬಗ್ಗೆ ತೀವ್ರವಾಗಿ ಪರಿಗಣಿಸಿ, ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಮಾಹಿತಿ ಹಕ್ಕು ಅರ್ಜಿಗಳ ಬಗ್ಗೆ ಅಧಿನಿಯಮಬಡಿಯಲ್ಲಿ ನಿಗದಿಪಡಿಸಿರುವ ಕಾಲಮಿತಿಯೊಳಗೆ ವಿಲೇವಾರಿ ಮಾಡಲು ಇನ್ನು ಮುಂದೆ ನಿಗಾ ವಹಿಸಿ ಕರ್ತವ್ಯ ನಿರ್ವಹಿಸುವಂತೆ ಎಚ್ಚರಿಕೆ ನೀಡುವಂತೆ ಆದೇಶಿಸಿದೆ.

ಆದುದರಿಂದ, ಮಾಹಿತಿ ಹಕ್ಕು ಅಧಿನಿಯಮದಡಿ ಸ್ವೀಕೃತವಾಗುವ ಮಾಹಿತಿ ಹಕ್ಕು ಅರ್ಜಿಗಳನ್ನು ಆದ್ಯತೆ ಮೇಲೆ ಪರಿಶೀಲಿಸಿ ನಿಗದಿಪಡಿಸಿರುವ ಕಾಲಮಿತಿಯೊಳಗೆ ಸೂಕ್ತ ಕ್ರಮಕೈಗೊಂಡು ಅರ್ಜಿದಾದರಿಗೆ ಮಾಹಿತಿ ನೀಡುವಂತೆ / ವಿಲೇವಾರಿ ಮಾಡುವಂತೆ ಎಲ್ಲ ಸಾರ್ವಜನಿಕ ಮಾಹಿತಿ ಅಧಿಕಾರಿಗಳು / ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಗಳು / ಎಲ್ಲಾ ಸಿಬ್ಬಂದಿವರ್ಗದವರಿಗೆ ಈ ಮೂಲಕ ನಿರ್ದೇಶನ ನೀಡಲಾಗಿದೆ. ತಪ್ಪಿದಲ್ಲಿ, ಸಂಬಂಧಿಸಿದವರನ್ನೇ ನೇರವಾಗಿ ಹೊಣೆಗಾರರನ್ನಾಗಿ ಮಾಡಲಾಗುವುದು.

(ತಪನ್ ಸೇನಾಪತಿ)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಸಿಆಸುಇ (ಜನಸ್ಪಂದನ ಕೋಶ)

ಗೆ,

1. ಎಲ್ಲಾ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಹಾಗೂ ಸರ್ಕಾರದ ಅಧೀನ ಕಾರ್ಯದರ್ಶಿಗಳು, (ಸಿಆಸು ಇಲಾಖೆ (ಜನಸ್ಪಂದನ ಕೋಶ– ಮಾಹಿತಿ ಹಕ್ಕು).
2. ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಹಾಗೂ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ (ಜನಸ್ಪಂದನ ಕೋಶ), ಬೆಂಗಳೂರು.
3. ಎಲ್ಲಾ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಹಾಗೂ ಶಾಖಾಧಿಕಾರಿಗಳು, ಸಿಆಸುಇಲಾಖೆ (ಜನಸ್ಪಂದನ ಕೋಶ– ಮಾಹಿತಿ ಹಕ್ಕು)/ ಪ್ರಧಾನ ಕಾರ್ಯದರ್ಶಿಗಳು, ಸಿಆಸು ಇಲಾಖೆ (ಜನಸ್ಪಂದನ) ರವರ ಆಪ್ತಶಾಖೆ. (ಈ ವಿಷಯವನ್ನು ಶಾಖೆಯ ಎಲ್ಲ ಸಿಬ್ಬಂದಿವರ್ಗದವರ ಗಮನಕ್ಕೆ ತರುವುದು).

Despatched on 6-5-09

ಪ್ರತಿ:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿಆಸುಇಲಾಖೆ (ಜನಸ್ಪಂದನ ಕೋಶ), ಬೆಂಗಳೂರು.
2. ಸರ್ಕಾರದ ಉಪ ಕಾರ್ಯದರ್ಶಿಗಳು, ಸಿಆಸುಇಲಾಖೆ (ಜನಸ್ಪಂದನ ಕೋಶ), ಬೆಂಗಳೂರು.
3. ಕಾರ್ಯದರ್ಶಿಗಳು, ಕರ್ನಾಟಕ ಮಾಹಿತಿ ಆಯೋಗ, ಬಹುಮಹಡಿ ಕಟ್ಟಡ, ಬೆಂಗಳೂರು (ಮುಖ ಪತ್ರದ ಮೂಲಕ) (Except this one)

6/5/09